2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ30/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವಿಶ್ವಾಸ್ | ಪಿಡಬ್ಲ್ಯೂ-1 |
| ತಂದೆಯ ಹೆಸರು | - | ರಮೇಶ್ | ಸಿಡಬ್ಲ್ಯೂ -1 |
| ವಯಸ್ಸು | - | 27 ವರ್ಷ | |
| ಉದ್ಯೋಗ | - | ವ್ಯಾಪಾರ | |
| ವಾಸ ಸ್ಥಳ | - | ಚಿಕ್ಕಮಗಳೂರು | |

ದಿನಾಂಕಃ 16.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿದ್ದೇನೆ. ಅವರ ಹೆಸರು ನೂತನ್, ಗಣೇಶ್, ಜೀವನ್. ನಿಶಾಂತ್ ಮತ್ತು ಪ್ರೀತಮ್ ಆರೋಪಿತರು ಈ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ, ಅವರನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ.2 ರಿಂದ ಚಾಸಾ.4 ನನ್ನ ಸ್ನೇಹಿತರು. ಚಾಸಾ.5 ನನ್ನ ಸೋದರ ಸಂಬಂಧಿ. ಚಾಸಾ.6 ಮತ್ತು ಚಾಸಾ.7 ನನ್ನ ಸ್ನೇಹಿತರು.

2. ದಿನಾಂಕ 09.07.2019 ರಂದು ಮಧ್ಯಾಹ್ನ 2.30 ಯಿಂದ 3.00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಊಟ ಮಾಡಿ ಕುಳಿತಿದ್ದೆನು. ಆಗ ನನ್ನ ತಮ್ಮನಾದ ಚಾಸಾ.5 ಸುದೀಪ್ ನಮ್ಮ ಮನೆಗೆ ಬಂದು ಆ ದಿನ ಮಧ್ಯಾಹ್ನ 2.45 ಗಂಟೆಗೆ ಆತ ವಿಜಯಪುರ ಮುಖ್ಯ ರಸ್ತೆಯಲ್ಲಿರುವ ಹಳೆ ಶೋ ಆಫ್ ಬಟ್ಟೆ

ಅಂಗಡಿಯ ಮುಂಭಾಗ ಹೋಗುತ್ತಿದ್ದ ಸಮಯದಲ್ಲಿ ನಿಶಾಂತ್ ಮತ್ತು ಜೀವನ್ ಅಡ್ಡ ಬಂದು ಆತನಿಗೆ ಕೈಗಳಿಂದ ಹೊಡೆದು, ಯಾರನ್ನು ಕರೆದುಕೊಂಡು ಬರುತ್ತೀಯೋ ಕರೆದುಕೊಂಡು ಬಾ ಎಂದು ಹೇಳಿ ಕಳುಹಿಸಿದ್ದಾಗಿ ತಿಳಿಸಿದನು. ನಿಶಾಂತ್ ಮತ್ತು ಜೀವನ್ ರವರು ನನ್ನ ತಮ್ಮನಿಗೆ ಬೋಳಿಮಗನೇ, ಸೂಳೆ ಮಗನೇ ಎಂದು ಬೈದಿದ್ದಾಗಿ ನನ್ನ ತಮ್ಮ ನನಗೆ ತಿಳಿಸಿದನು. ನಂತರ ನನ್ನ ತಮ್ಮ ಬಾ ಎಂದು ಹೇಳಿ ನನ್ನನ್ನು ವಿಜಯಪುರ ಮುಖ್ಯ ರಸ್ತೆಯಲ್ಲಿರುವ ಹಳೆ ಶೋ ಆಫ್ ಬಟ್ಟೆ ಅಂಗಡಿಯ ಬಳಿ ಕರೆದುಕೊಂಡು ಹೋದನು. ನಾನು ಅಲ್ಲಿಗೆ ಹೋದಾಗ ನಿಶಾಂತ್, ಜೀವನ್ ಮತ್ತು ಉಳಿದ ಎಲ್ಲಾ ಆರೋಪಿತರು ಅಲ್ಲಿ ಇದ್ದರು. ನಾನು ಅವರನ್ನು ಕುರಿತು ಏಕೆ ನನ್ನ ತಮ್ಮನಿಗೆ ಹೊಡೆದಿರಿ ಎಂದು ಕೇಳಿದೆನು. ಆಗ ಆರೋಪಿತರಾದ ನಿಶಾಂತ್ ನಿನಗೂ ಹೊಡೆಯುತ್ತೇನೆ, ನಿನ್ನ ತಮ್ಮನಿಗೂ ಹೊಡೆಯುತ್ತೇನೆ ಎಂದು ಹೇಳಿ ತನ್ನ ಕೈಯಲ್ಲಿದ್ದ ಕಬ್ಬಿಣದ ರಾಡಿನಿಂದ ನನ್ನ ತಲೆಯ ಎಡಭಾಗಕ್ಕೆ ಮತ್ತು ಎಡಕೈಗೆ ಹೊಡೆದನು. ಅದರಿಂದ ನನಗೆ ಗಾಯವಾಗಿ ರಕ್ತ ಬಂತು. ಆಗ ಉಳಿದ ಆರೋಪಿತರು ಕೈಗಳಿಂದ ನನ್ನ ಮೈಕೈಗೆ ಮತ್ತು ಕಾಲುಗಳಿಗೆ ಹೊಡೆದರು. ಆಗ ಅಲ್ಲಿಯೇ ಇದ್ದ ನನ್ನ ತಮ್ಮನಾದ ಚಾಸಾ.5 ಸುದೀಪ್ ಮತ್ತು ನನ್ನ ಸ್ನೇಹಿತರಾದ ಪವನ್, ಅಭಿಷೇಕ್, ಚೇತನ್ ಮತ್ತು ಶಬರೀಶ್ ರವರು ಅಲ್ಲಿಗೆ ಬಂದು ಜಗಳವನ್ನು ಬಿಡಿಸಿ ನನ್ನನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ನನ್ನ ತಲೆಯ ಎಡಭಾಗದಲ್ಲಿ ಗಾಯವಾಗಿ ರಕ್ತ ಬರುತ್ತಿದ್ದರಿಂದ ಚಿಕಿತ್ಸೆಗಾಗಿ ದಾಖಲಿಸಿದರು. ಮಾರನೇ ದಿನ

ಅಂದರೆ 10 ನೇ ತಾರೀಖಿನಂದು ಮಧ್ಯಾಹ್ನ 1.15 ಗಂಟೆಯಿಂದ 1.45 ಗಂಟೆ ಸಮಯಕ್ಕೆ ಬಸವನಹಳ್ಳಿ ಪೊಲೀಸರು ಸದರಿ ಆಸ್ಪತ್ರೆಗೆ ಬಂದರು. ಆ ಸಮಯದಲ್ಲಿ ನನ್ನ ಸ್ನೇಹಿತರಾದ ಪವನ್ , ಶಬರೀಶ್ ಮತ್ತು ನನ್ನ ತಮ್ಮ ಸುದೀಪ್ ನನ್ನನ್ನು ನೋಡಲು ಸದರಿ ಆಸ್ಪತ್ರೆಗೆ ಬಂದಿದ್ದರು. ಆಗ ಪೊಲೀಸರು ನನ್ನನ್ನು ವಿಚಾರಿಸಿ ಎಲ್ಲಿ ಗಲಾಟೆಯಾಯಿತು ಎಂದು ಕೇಳಿದರು. ಪೊಲೀಸರು ನನ್ನನ್ನು ವಿಚಾರಿಸಿ ನಾನು ಧರಿಸಿದ್ದ ಹಸಿರು ಪಾಚಿ ಬಣ್ಣದ ಟೀ ಶರ್ಟನ್ನು ಲ್ಯಾಬಿಗೆ ಕಳುಹಿಸಬೇಕು ಎಂದು ಹೇಳಿ ತೆಗೆದುಕೊಂಡರು. ಸದರಿ ಶರ್ಟನ್ನು ನಾನು ಗಲಾಟೆಯ ಸಮಯದಲ್ಲಿ ಧರಿಸಿದ್ದೆನು ಮತ್ತು ಅದಕ್ಕೆ ರಕ್ತದ ಕಲೆಗಳು ಆಗಿದ್ದವು. ಅದನ್ನು ಪೊಲೀಸರು ತೆಗೆದುಕೊಂಡು, ಮಹಜರ್ ಗೆ ನನ್ನ ಸಹಿಯನ್ನು ತೆಗೆದುಕೊಂಡರು. ಸದರಿ ಮಹಜರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಗೆ ನನ್ನ ಜೊತೆ ಪವನ್ , ಶಬರೀಶ್ ರವರು ಸಹಿ ಮಾಡಿದ್ದಾರೆ.

3. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ನಿಪಿ.2 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಮಹಜರ್ ಮಾಡುವ ಸಮಯಕ್ಕೆ ತೆಗೆದುಕೊಂಡರು. ಅದರಲ್ಲಿ ನನ್ನ ಜೊತೆ ಪವನ್, ಶಬರೀಶ್ ಮತ್ತು ನನ್ನ ತಮ್ಮ ಸುದೀಪ್ ಇದ್ದಾರೆ.

4. ಬಿಳಿಯ ಬಟ್ಟೆಯಲ್ಲಿ ಹೊಲೆದು, ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ವಸ್ತುವನ್ನು ಆರೋಪಿತರ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ಈ ದಿನ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿದ್ದ ಒಂದು ಪಾಚಿ ಹಸಿರು ಬಣ್ಣದ ಟೀ ಶರ್ಟನ್ನು ನೋಡಿ ಗುರುತಿಸಿ ತಾನು ಘಟನೆ ನಡೆದ ಸಮಯದಲ್ಲಿ ಧರಿಸಿದ್ದ ಟೀ ಶರ್ಟು ಅದೇ ಎಂದು ಗುರುತಿಸಿರುತ್ತಾರೆ. ಸದರಿ ಟೀ ಶರ್ಟನ್ನು ಮು.ಮಾ.1 ಎಂದು ಗುರುತಿಸಲಾಯಿತು. ಅದರಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ.

5. 9 ನೇ ತಾರೀಖಿನಂದು ನಾನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿದ್ದ ಸಮಯದಲ್ಲಿ ಮಧ್ಯಾಹ್ನ 3.00 ರಿಂದ 4.00 ಗಂಟೆ ಸಮಯಕ್ಕೆ ಬಸವನಹಳ್ಳಿ ಪೊಲೀಸರು ಬಂದು ನನ್ನನ್ನು ನೋಡಿಕೊಂಡು ವಿಚಾರಿಸಿದರು. ಆಗ ನಾನು ಅವರಿಗೆ ಆರೋಪಿತರು ನನ್ನ ತಮ್ಮನಿಗೆ ಹೊಡೆದಿದ್ದಾಗಿ ಮತ್ತು ಅದನ್ನು ಕೇಳಲು ಹೋದಾಗ ಆರೋಪಿತರು ನನಗೂ ಸಹ ಹೊಡೆದಿದ್ದಾಗಿ ತಿಳಿಸಿದೆನು.

6. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿನಾಂಕ 09.07.2019 ರಂದು ಸಾಕ್ಷಿಯು ನೀಡಿದ್ದಾರೆ ಎಂದು ಹೇಳಲಾದ ಹೇಳಿಕೆಯ ದೂರಾಗಿದ್ದು ಅದನ್ನು ನಿಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಚಿಕ್ಕಮಗಳೂರು ಜಿಲ್ಲಾ

ಆಸ್ಪತ್ರೆಯಲ್ಲಿ ದಿನಾಂಕ 09.07.2019 ರಂದು ಮಾಡಿದ್ದೇನೆ. ಅದು ಗಲಾಟೆಯ ಬಗ್ಗೆ ನಾನು ಪೊಲೀಸರಿಗೆ ನೀಡಿದ ದೂರಾಗಿರುತ್ತದೆ.

7. ಸಾಕ್ಷಿಯು ಒಂದು ಕಬ್ಬಿಣದ ರಾಡನ್ನು ನೋಡಿ ಗುರುತಿಸಿ ನಿಶಾಂತ್ ತನಗೆ ಹೊಡೆಯಲು ಬಳಸಿದ್ದ ರಾಡು ಅದೇ ಎಂದು ನುಡಿದಿರುತ್ತಾರೆ. ಸದರಿ ರಾಡನ್ನು ಮು.ಮಾ.2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

8. 1 ನೇ ಆರೋಪಿ ನಿಶಾಂತ್ ನಿಮಗೆ ಸೂಳೆ ಮಗನೇ ಎಂದು ನಿಮಗೆ ಬೈದಿದ್ದಾಗಿ ಮತ್ತು ನಿಮ್ಮ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದಾಗಿ ನಿಪಿ.3 ದೂರಿನಲ್ಲಿ ತಿಳಿಸಿದ್ದೀರಿ ಎಂದರೆ ಸರಿ.

**(**ಪಾಟೀ ಸವಾಲು**:** ಆರೋಪಿತರ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಚಾಸಾ.**5** ರಿಂದ ಚಾಸಾ.**7** ರವರ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಅರ್ಜಿ ಸಲ್ಲಿಸಿದ ಮೇರೆಗೆ ಅದನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲನ್ನು ಸದರಿ ಸಾಕ್ಷಿದಾರರ ವಿಚಾರಣೆಯಾಗುವವರೆಗೆ ಮುಂದೂಡಲಾಯಿತು.**)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ